ಹೊಸ ದಿಗಂತ
03
10 Jan 2019

# ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ: ತಳವಾರ

**ಶಿರಹಟ್ಟಿ:** ಮಕ್ಕಳಿಗೆ ಮನೆಯಲ್ಲಿ ಉತ್ತಮ ಸಂಸ್ಕಾರ ನೀಡಿ, ಗುಣಮಟ್ಟದ ಶಿಕ್ಷಣ ಕಲ್ಪಿಸಿ, ಭವ್ಯ ಭಾರತ ನಿರ್ಮಿಸುವ ಶಿಲ್ಪಿಗಳನ್ನಾಗಿ ಮಾಡುವುದರ ಮೂಲಕ ಈ ದೇಶದ ಆಸ್ತಿಯ ನ್ನಾಗಿ ರೂಪಿಸುವ ಹೊಣೆ ತಂದೆ-ತಾಯಿಗಳದ್ದಾಗಿದೆ ಎಂದು ಬಿ.ಡಿ.ತಳವಾರ ಹೇಳಿದರು.

ತಾಲೂಕಿನ ಮಜ್ಜೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಮಕ್ಕಳ ಜಾಗೃತಿ ಸಂಸ್ಥೆಯ ಆಶ್ರಯದಲ್ಲಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಯಲ್ಲಿ ಪೋಷಕರ ಪಾತ್ರ ಬಹಳ ಅವಶ್ಯ ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳಿಗೆ ಮನೆಯು ಮೊದಲ ಪಾಠ. ಆದ್ದರಿಂದ ಮಕ್ಕಳಿಗೆ ಮನೆಯಲ್ಲಿ ಓದಲು ಉತ್ತಮ ವಾತವರಣ ಕಲ್ಪಿಸಿ ಬುದ್ಧಿವಂತರನ್ನಾಗಿ ಮಾಡಬೇಕು. ತಂದೆ ತಾಯಿಗಳು ತಮ್ಮ ದಿನ ನಿತ್ಯದ ಕೆಲಸದ ಒತ್ತಡಗಳನ್ನು ಮಕ್ಕಳ ಮೇಲೆ ಹಾಕದೆ ಪ್ರೀತಿಯಿಂದ ನೋಡಿಕೊಳ್ಳಬೇಕು. ಅಂದಾಗ ಮಾತ್ರ ನಮ್ಮ ಮಕ್ಕಳು ಉತ್ತಮ ಶಿಕ್ಷಣ ಪಡೆದು ಜ್ಞಾನವಂತರಾಗಿ ಸಮಾಜದಲ್ಲಿ ಉತ್ತಮ ಸ್ಥಾನಗಳನ್ನು ಪಡೆದುಕೊಳ್ಳುವುದರ ಮೂಲಕ ಗೌರವಿತ ಜೀವನ ನಡೆಸುತ್ತಾರೆ. ಮತ್ತು ಭವ್ಯ ಭಾರತ ನಿರ್ಮಿಸುವ ಶಿಲ್ಪಿಗಳಾಗಿ ದೇಶ ಸೇವೆ ಸಲ್ಲಿಸುತ್ತಾರೆ ಎಂದು ಹೇಳಿದರು.

ಎಲ್.ನರಸಿಂಹರಾಜು, ಈರಣ್ಣ ಮಳ್ಳಿಗಟ್ಟಿ, ಸುನೀಲ ತಳವಾರ, ಫಕ್ಕೀರೇಶ ಯಳವತ್ತಿ ಶಾಲಾ ಸಿಬ್ಬಂದಿ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

